MR.SPEAKER: I totally agree with the Hon'ble Member Sri. H.Shivappa. I have upheld your point of order. It is zero Hour. We should not have gone for the discussion. That is the reason why I have been appealing to the Hon'ble Members time and again to refer to the rule which is currently being invoked and act accordingly. Unfortunately, the Members are not willing to cooperate with me. I totally honour your sentiments.

SRI.H.SHIVAPPA: Every time this is repeated here, sir.

ಶ್ರೀ ಹೆಚ್.ಎನ್.ನಂಜೇಗೌಡ: ಬಹುಶಃ ದಿನಕರ ದೇಸಾಯಿವರದ್ದು ಎಂದು ಕಾಣುತ್ತದೆ, ''ಕದ್ದು ಸೇದುವ ಮಗಗೆ ಬುದ್ಧಿ ಹೇಳುವ ತಂದೆ ತಾ ಮಾತ್ರ ಬಿಡಲಿಲ್ಲ ತನ್ನ ಚಟವ, ಮದ್ಯ ಸೇವಿಸದೆನೇ ನಿದ್ದೆ ಹೋಗದ ದೇವ ಮದ್ಯ ತಡೆಹಿಡಿಯೆ ತಾ ಹಿಡಿದ ಹಠವ'' ಹಾಗಿದೆ ನಿಮ್ಮ ನೀತಿ.

ಶ್ರೀ ಎಂ.ಸಿ.ನಾಣಯ್ಯ: ನಿಮ್ಮದೂ ಕೂಡ ಅದೆರೀತಿ ತಾನೇ?

(ಬ) ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರ ಮೇಲೆ ನಡೆದ ಹಲ್ಲೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರ ಮೇಲೆ ಕೋಲಾರದಿಂದ ಬಂದಂಥ ಕೆಲವು ವಿದ್ಯಾರ್ಥಿಗಳು ಅವರು ಸಭೆಯಲ್ಲಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಅವರನ್ನು ಸಭೆಯಿಂದ ಹೊರಗಡೆಗೆ ಎಳೆದುಕೊಂಡು ಹೋಗಿ ಅವರ ಮೇಲೆ ಶಾರೀರಿಕವಾಗಿ ಹಲ್ಲೆ ಮಾಡಿರುವುದು ಇವತ್ತು ಗಮನಕ್ಕೆ ಬಂದಿದೆ. ಅದೇ ರೀತಿಯಲ್ಲಿ ಅಲ್ಲಿ ಶಿಕ್ಷಕರೂ ಕೂಡ ಇದರ ಬಗ್ಗೆ ಪ್ರತಿಭಟಿಸಿ ಧರಣಿ ಮಾಡುತ್ತಿದ್ದಾರೆ. ಮತ್ತೆ ಆ ಶಿಕ್ಷಕರಿಗೆ ಬೆಂಬಲವಾಗಿ ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಕೂಡ ಧರಣಿ ಕುಳಿತಿದ್ದಾರೆ. ಇಡೀ ವಿಶ್ವವಿದ್ಯಾಲಯವೇ ಒಂದು ರೀತಿಯಾಗಿ ಪ್ರಕ್ಷುಬ್ಧ ವಾತಾವರಣದಲ್ಲಿದೆ. ಮತ್ತೆ ಈ ಪರಿಸ್ಥಿತಿ ಹೀಗೆ ಮುಂದುವರೆದರೆ ವಿದ್ಯಾರ್ಥಿಗಳು ಪ್ರಾಧ್ಯಾಪಕರನ್ನು ಹೊಡೆದು, ಹಲ್ಲೆ ಮಾಡಿ ಅಂಕಗಳನ್ನು ಹೆಚ್ಚು ಹಾಕಬೇಕೆಂದು ಒತ್ತಾಯ ಮಾಡುವುದಾದರೆ ನಮ್ಮ ರಾಜ್ಯದ ಶಿಕ್ಷಣದ ಪರಿಸ್ಥಿತಿ ಯಾವ ಮಟ್ಟಕ್ಕೆ ಬರುತ್ತದೆ ಎನ್ನುವ ಬಹಳ ಅಪಾಯದ ಪರಿಸ್ಥಿತಿ ಇವತ್ತು ಮೂಡಿದೆ; ಇದಕ್ಕೆ ಯಾರು ಕಾರಣ? ಏತಕ್ಕೆ ಈ ರೀತಿಯಾಗಿದೆ? ಈ ರೀತಿಯಾಗಿ ವಿಶ್ವವಿದ್ಯಾಲಯಗಳಲ್ಲಿ ಗೂಂಡಾಗಿರಿ ಮಾಡಿ, ಪ್ರಾಧ್ಯಾಪಕರನ್ನು ಹೆದರಿಸಿ, ಸಭೆಯಲ್ಲಿದ್ದಾಗ ಕತ್ತಿನಪಟ್ಟಿಯನ್ನು ಹಿಡಿದುಕೊಂಡು ಬಂದು ಅವರನ್ನು ಹೊಡೆದು, ಅವರ ಮೇಲೆ ದೂರನ್ನು ಕೊಟ್ಟರೆ,

ನಾವು ದೌರ್ಜನ್ಯದ ದೂರನ್ನು ಪ್ರಾಧ್ಯಾಪಕರ ಮೇಲೆ ಕೊಡುತ್ತೇವೆಂದು ಕೇಸನ್ನು ದಾಖಲು ಮಾಡಿಕೊಳ್ಳಬೇಕೆನ್ನುವ ಪರಿಸ್ಥಿತಿ ಬಂದಿದೆ. ನಿಜವಾಗಿಯೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ, ಅದಕ್ಕೆ ಇದನ್ನು ನಿಲ್ಲಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಎಂ.ಸಿ.ನಾಣಯ್ಯ: ಸನ್ಮಾನ್ಯ ಅಧ್ಯಕ್ಷರೇ, ಆ ವಿಷಯವನ್ನು ನಾವು ಇವತ್ತು ಪತ್ರಿಕೆಯಲ್ಲಿ ಕೂಡ ನೋಡಿದ್ದೇವೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾಗಿರುವಂತಹ ಶ್ರೀ ವಿದ್ಯಾಶಂಕರ್ ಎಂಬುವವರ ಮೇಲೆ ಕೆಲವು ವಿದ್ಯಾರ್ಥಿಗಳು ಅವರು ಮೀಟಿಂಗ್‌ನಲ್ಲಿ ಇದ್ದಾಗ ಅವರನ್ನು ಎಳೆದು ಹಲ್ಲೆ ಮಾಡಿರತಕ್ಕದ್ದು ನಿಜ. ಈ ಘಟನೆಯ ನಂತರ ಅವರು ಕೂಡಲೇ ಒಂದು ಮೊಕದ್ದಮೆಯನ್ನು....

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ನಾಣಯ್ಯನವರೇ ಉನ್ನತ ಶಿಕ್ಷಣ ಸಚಿವರಾಗಿರುವಂತಿದೆ.

ಅಧ್ಯಕ್ಷರು: ಬೆಳಿಗ್ಗೆಯಿಂದ ಇದೇ ವಿಷಯ ಚರ್ಚೆಯಾಗುತ್ತಿದೆ. ಸರ್ಕಾರದ ಪರವಾಗಿ ಯಾರು ಇರುತ್ತಾರೋ ಅವರು ಉತ್ತರ ಹೇಳಲಿ ಬಿಡಿ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ವಾಟಾಳ್‌ರವರೇ, ತಾವು ಬೆಳಿಗ್ಗೆ ಸ್ವಲ್ಪ ತಡವಾಗಿ ಬಂದಿರಿ. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಬೆಳಿಗ್ಗೆ ಒಂದು ಆದೇಶ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ನಾಣಯ್ಯನವರೇ ಉನ್ನತ ಶಿಕ್ಷಣ ಖಾತೆಯನ್ನು ವಹಿಸಿಕೊಳ್ಳಬೇಕೆಂದು ತೀರ್ಮಾನವಾಯಿತೇ? ತಮಗೆ ಏನಾದರೂ ಆ ಇಲಾಖೆಗೆ ವರ್ಗಾವಣೆಯಾಗಿದೆಯೇ?

ಶ್ರೀ ಎಂ.ಸಿ.ನಾಣಯ್ಯ: ಇಲ್ಲ.

ಅಧ್ಯಕ್ಷರು: ಹೀಗೆ ಅನಾವಶ್ಯಕವಾಗಿ ಚರ್ಚೆ ಮಾಡುತ್ತಾ ಸಮಯ ಕಳೆದು ಹೋಗುತ್ತದೆ. ಯಾರೋ ಒಬ್ಬರು ಸರ್ಕಾರದ ಪರವಾಗಿ ಉತ್ತರ ಹೇಳಲಿ ಬಿಡಿ. ಸರ್ಕಾರದ ಪರವಾಗಿ ಉತ್ತರ ಹೇಳುವುದಕ್ಕೆ ಯಾರಾದರೇನು?

ಶ್ರೀ ವಾಟಾಳ್ ನಾಗರಾಜ್: ಯಾರೋ ಒಬ್ಬರು ಉತ್ತರ ಕೊಟ್ಟು ಬಿಡಲಿ ಅಂತೀರಾ?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಹಲ್ಲೆಯಾದ ಕೂಡಲೇ ಪೋಲೀಸರು ಆ ಬಗ್ಗೆ ಮೊಕದ್ದಮೆಯೊಂದನ್ನು ದಾಖಲು ಮಾಡಿಕೊಂಡಿರುತ್ತಾರೆ. ಹಲ್ಲೆಯ ನೇತೃತ್ವ ವಹಿಸಿದ್ದನೆಂದು ಹೇಳಲಾದ ರವಿಕುಮಾರ್ ಎಂಬ ವಿದ್ಯಾರ್ಥಿಯೊಬ್ಬನನ್ನು ಈಗಾಗಲೇ ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಪೋಲಿಸರು ವಿಚಾರಣೆಯನ್ನು

ಮುಂದುವರೆಸುತ್ತಿದ್ದಾರೆ. ಹೆಚ್ಚಿನ ಮಾಹಿತಿಯನ್ನು ನಾನು ತಮಗೆ ನಾಳೆ ಅಥವಾ ನಾಡಿದ್ದು ಸದನದ ಮುಖಾಂತರ ತಿಳಿಸುತ್ತೇನೆ.

ಅಧ್ಯಕ್ಷರು: ಮುಂದಿನ ವಿಷಯ ಮಾನ್ಯ ಸುರೇಶ್‌ಕುಮಾರ್‌ರವರು ಪ್ರಸ್ತಾಪಿಸಬೇಕು.

ಶ್ರೀ ಎನ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಇದೀಗ ತಾನೇ ಪ್ರಸ್ತಾಪಿಸಿದ ವಿಷಯವನ್ನೇ ನಾನೂ ಕೂಡ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಬಯಸಿದ್ದೆ.

ಅಧ್ಯಕ್ಷರು: ಹೌದೇ, ಹಾಗಾದರೆ ಬಿಡಿ, ಈಗಾಗಲೇ ಅವರು ಪ್ರಸ್ತಾಪಸಿದ್ದಾರಲ್ಲಾ.

(ಓ) ತುಮಕೂರು ಜಿಲ್ಲೆಯಲ್ಲಿ ಒಂದು ವರ್ಷದಿಂದ ಪಂಪ್‌ಸೆಟ್‌ಗಳಿಗೆ ಸರ್ವೀಸ್ ಕೊಡದಿರುವುದು ಹಾಗೂ ಅಂತರಜಲ ಕ್ಷೀಣಿಸುತ್ತಿರುವುದು.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಸನ್ಮಾನ್ಯ ಅಧ್ಯಕ್ಷರೇ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಈ ಅಂರ್ತಜಲ ಕ್ಷೀಣಿಸುತ್ತಿರುವುದರ ಬಗ್ಗೆ ವರ್ಷ ವರ್ಷಕ್ಕೆ ಸರ್ಕಾರಕ್ಕೆ ವರದಿ ಕೊಡುತ್ತಿರುತ್ತಾರೆ. ಸರ್ಕಾರ ತನ್ನದೇ ಆದಂತಹ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಂರ್ತಜಲ ವೃದ್ಧಿ ಮಾಡತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇಲಾಖೆಯವರು ಕೊಟ್ಟಂತಹ ವರದಿಯನ್ನು ಆಧರಿಸಿ ತುಮಕೂರು ಜಿಲ್ಲೆಯನ್ನು ಕಪ್ಪು ಪ್ರದೇಶ 'ಬ್ಲ್ಯಾಕ್ ಏರಿಯಾ' ಎಂದು ಡಿಕ್ಲೇರ್ ಮಾಡಲಾಗಿದೆ. ಇಡೀ ತುಮಕೂರು ಜಿಲ್ಲೆಯಲ್ಲಿ ಸುಮಾರು ಒಂದು ವರ್ಷದಿಂದ ಯಾವ ಪಂಪ್‌ಸೆಟ್‌ಗಳಿಗೂ ಕೂಡ ಸರ್ವೀಸ್ ಕೊಟ್ಟಿಲ್ಲ. ಈ ರೀತಿಯ ಒಂದು ಆಜ್ಞೆ ಮಾಡುವ ಮೊದಲು ಸರ್ಕಾರ ಜನಗಳಿಗೆ ಒಂದು ತಿಳುವಳಿಕೆ ಕೊಡಬೇಕಾಗುತ್ತದೆ. ಈ ರೀತಿ ವರದಿ ಬಂದಿದೆ, ಈ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ, ಯಾರಿಗೂ ಲೋನ್ ಕೊಡಬೇಡಿ, ಬೋರ್ ಕೊರೆಸಬೇಡಿ ಅನ್ನತಕ್ಕಂಥ ಮಾತನ್ನು ಸರ್ಕಾರದವರು ಜನಗಳಿಗೆ ಹೇಳಬೇಕಾಗುತ್ತದೆ. ಯಾವುದನ್ನೂ ಹೇಳದೇ ಏಕಾಏಕಿಯಾಗಿ ಆಜ್ಞೆಯನ್ನು ಮಾಡಿದರೆ ಹೆಗೆ? ಈ ಆಜ್ಞೆ-ಯಾದರೂ ಯಾವುದು ಎಂದರೆ ಕೆ.ಇ.ಬಿ.ಯ ಒಂದು ಸುತ್ತೋಲೆ. ತದನಂತರ ಒಂದು ಸರ್ಕಾರಿ ಆಜ್ಞೆ ಬರುತ್ತದೆ. ಯಾವ ಪಂಪ್‌ಸೆಟ್ಟುಗಳಿಗೂ ಕೂಡ ಇವತ್ತು ಸರ್ವೀಸ್ ಕೊಡುತ್ತಿಲ್ಲ. ದುರಾದೃಷ್ಟವಶಾತ್ ನಮ್ಮಲ್ಲಿ ಮಳೆ ಇಲ್ಲದ ಕಾರಣ ನಮ್ಮಲ್ಲಿ ಅಮೂಲ್ಯವಾಗಿರತಕ್ಕಂತಹ ಅಡಿಕೆ, ತೆಂಗು ಹಾಳಾಗುತ್ತಿದೆ. ಇವತ್ತು ರೈತ ಬೋರ್ ಕೊರೆಸಿಕೊಂಡು ವಿದ್ಯುತ್ ಕನೆಕ್ಷನ್‌ಗಾಗಿ ಕಾಯುತ್ತಾ ಕುಳಿತಿದ್ದಾನೆಯೇ ವಿನಃ, ಇವತ್ತು ಅವನ ಬೋರ್‌ವೆಲ್‌ಗೆ ಸರ್ವೀಸ್ ಕೊಡದೇ ಇರುವುದರಿಂದ ಅವನು ಅಡಿಕೆ, ತೆಂಗು ಉಳಿಸಿಕೊಳ್ಳತಕ್ಕಂತಹ ಪರಿಸ್ಥಿತಿಯಲ್ಲಿ ಇಲ್ಲ. ಅಂರ್ತಜಲ ಇಲ್ಲ ಎಂಬ ಇಲಾಖೆಯ ವರದಿಗೆ ಏನೂ ಆಧಾರವಿಲ್ಲ. ಈಗಾಗಲೇ ನಮಗೆ ಹೇಮಾವತಿ ನೀರು ಬಂದು ಐದು ತಾಲ್ಲೂಕುಗಳಲ್ಲಿ ಸಾಕಷ್ಟು ನೀರು